ದಿನಾಂಕ :24.03.2026 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಆರ್ ಸಿ ವಕೀಲರಿಂದ,</u>**

ದಿನಾಂಕ 21-09-2013 ರಲ್ಲಿ ಸದರಿ ದಾವೆಯಲ್ಲಿ ಪ್ರತಿವಾದ ಪತ್ರವನ್ನು ನಾನೇ ಹಾಕಿರುತ್ತೇನೆ ಎಂದರೆ ಸರಿ. ಪ್ರತಿವಾದ ಪತ್ರದಲ್ಲಿರುವ ಪುಟದ ಸಂಖ್ಯೆ 5 ಪ್ಯಾರಾ 11 ರಲ್ಲಿ ಸರ್ವೆ ನಂಬರ್ 361/3 ರಲ್ಲಿ ಪಾರ್ವತಮ್ಮನವ್ವರಿಗೆ ಕೊಟ್ಟಿರುತ್ತೇವೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪಾರ್ವತಮ್ಮ ನನ್ನ ಅಕ್ಕ ಎಂದರೆ ಸರಿ. ಗವಿಸಿದ್ದಪ್ಪ ನನ್ನ ಅಣ್ಣ. ದಾವ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ಪ್ರತಿವಾದ ಪತ್ರದಲ್ಲಿರುವ ಪುಟದ ಸಂಖ್ಯೆ 5 ಪ್ಯಾರಾ 12 ರಲ್ಲಿ ಸರ್ವೆ ನಂಬರ್ 258 ರಲ್ಲಿ 14 ಎಕರೆ ಇರುತ್ತದೆ ಎಂದರೆ ಸಾಕ್ಷಿಯು 13.56 ಎಕರೆ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಸರ್ವೆ ನಂಬರ್ 258 ರಲ್ಲಿ, 13.56 ಎಕರೆ ಭೂಮಿಯಲ್ಲಿ 6 ಎಕರೆ ಜಮೀನನ್ನು 11 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ತಾಯಿ ಮತ್ತು ಅವರ ಮೂರು ಜನ ಹೆಣ್ಣು ಮಕ್ಕಳು ತಾಯಮ್ಮ, ಸರಸ್ವತಮ್ಮ, ಲಕ್ಷ್ಮೀದೇವಿ ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ಉಳಿದ 7.56 ಎಕರೆ ಜಮೀನು ನಮ್ಮ ತಾಯಿಯವರಿಗೆ ಸೇರಿದ್ದು, ಅವರ ತದನಂತರ ಎಲ್ಲರಿಗೆ ಸೇರಿರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸರಸ್ವತಮ್ಮ ಮತ್ತು ಲಕ್ಷ್ಮೀದೇವಿ ಕ್ರಯ ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿ. ಶಿವಮ್ಮ ನನ್ನ ಅಣ್ಣನ ಹೆಂಡತಿ, ಜಡೇಸ್ವಾಮಿ ನನ್ನ ಅಣ್ಣನ ಮಗ, ನಾಗೇಶ್ವರಮ್ಮ

ನನ್ನ ಇನ್ನೊಬ್ಬ ಷಣ್ಮುಖಪ್ಪನ ಅಣ್ಣನ ಹೆಂಡತಿ. ಸರ್ವೆ ನಂಬರ್ 360 ಮತ್ತು 361 ರ ಭೂಮಿಯನ್ನು ಕೆಐಡಿಬಿ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಜಡೇಸ್ವಾಮಿ, ಶಿವಮ್ಮ ರವರು ರೂ. 5 ಲಕ್ಷ ಹಣವನ್ನು ವಾದಿಗೆ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ರೂ. 10 ಲಕ್ಷ ಹಣವನ್ನು ವಾದಿಗೆ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ನಾಗೇಶ್ವರಮ್ಮ, ಕಮಲರಾಜು, ಮಲ್ಲಿಕಾರ್ಜುನ, ದೊಡ್ಡಬಸಪ್ಪ ರವರು 3 ನೇ ವಾದಿಗೆ ರೂ. 5 ಲಕ್ಷ ಹಣವನ್ನು ನೀಡಿರುತ್ತಾರೆ ಎಂದರೆ, ಸಾಕ್ಷಿಯು ಮುಂದುವರೆದು ರೂ. 10 ಲಕ್ಷ ಹಣವನ್ನು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ನಾಗೇಶ್ವರಮ್ಮ, 2 ಮತ್ತು 3 ನೇ ವಾದಿಗೆ ರೂ. 5 ಲಕ್ಷ ಹಣವನ್ನು 8 ನೇ ಪ್ರತಿವಾದಿಯು ನೀಡಿರುತ್ತಾರೆ ಎಂದರೆ, ಸಾಕ್ಷಿಯು ಮುಂದುವರೆದು ರೂ. 10 ಲಕ್ಷ ಹಣವನ್ನು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಕರಾರು ಪತ್ರದಲ್ಲಿ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ತಾಯಮ್ಮ/ 9 ನೇ ಪ್ರತಿವಾದಿಗೆ ರೂ.12 ಲಕ್ಷ ವನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಸರ್ವೆ ನಂಬರ್ 258 ರ ಭೂಮಿಯನ್ನು ಕೆಐಡಿಬಿ ಸ್ವಾಧೀನ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ್ 258 ರ ಭೂಮಿಯನ್ನು ನನ್ನ ಮತ್ತು ಶಾರದೇವಿಯವರ ಹೆಸರಿಗೆ ಇರುತ್ತದೆ ಎಂದರೆ ಸರಿ. ಸರ್ವೆ ನಂಬರ್ 258 ರಲ್ಲಿ ವಾದಿ ಲಕ್ಷ್ಮಿದೇವಿ, ಸರಸ್ವತಿಯವರು ಹಕ್ಕು ಇರುವುದಿಲ್ಲ ಎಂದು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಾಯಿಗೆ ಕೊಟ್ಟಿರುವ 6 ಎಕರೆ ಜಮೀನನಲ್ಲಿ ಅವರಿಗೆ ಭಾಗ ಇರುತ್ತದೆ ಎಂದು ನುಡಿದಿರುತ್ತಾರೆ. ಸರ್ವೆ ನಂಬರ್ 258 ರ

ಪೈಕಿ ಶಾರದೇವಿಗೆ 6 ಎಕರೆ ಮಾರಾಟ ಮಾಡಿರುವುದರಲ್ಲಿ 1 ರಿಂದ 8 ನೇ ಪ್ರತಿವಾದಿಗಳು ಸಹಿ ಮಾಡಿರುತ್ತಾರೆ ಎಂದರೆ ಸರಿ. 1 ರಿಂದ 3 ನೇ ವಾದಿಗಳಿಗೆ ಮಾರಾಟ ಮಾಡಿರುವ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 8 ನೇ ಪ್ರತಿವಾದಿಗಳು ಸರ್ವೆ ನಂಬರ್ 258 ರ ಭೂಮಿಯನ್ನು ಮಾರಾಟ ಮಾಡಿರುವುದನ್ನು 2 ಮತ್ತು 3 ನೇ ವಾದಿಗಳಿಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಈರಮ್ಮ 6 ಎಕರೆಗೆ ಹಣವನ್ನು ನೀಡಿರುವುದಿಲ್ಲ, 2 ಮತ್ತು 3 ನೇ ವಾದಿಗೆ ಸರ್ವೆ ನಂಬರ್ 258, 360 ಮತ್ತು 361 ರಲ್ಲಿ ಭಾಗ ಇರುತ್ತದೆ ಎಂದು ದಾವ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 12-10-2018 ರಂದು ನಾನು ಸರ್ವೆ ನಂಬರ್ 258 ರ ಆಸ್ತಿಯನ್ನು 7. 56 ಎಕರೆಯನ್ನು ನನ್ನ ಮಗ ಸರ್ವಜ್ಞ ರವರ ಹೆಸರಿಗೆ ದಾನ ಪತ್ರ ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾನ ಪತ್ರ ಬರೆದುಕೊಟ್ಟಿರುವ ಬಗ್ಗೆ ಆರ್ ಎ ರಲ್ಲಿ ನನ್ನ ಮಗನನ್ನು ಪಕ್ಷಗಾರನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅದೇ ಪ್ರಕಾರ ಸದರಿ ಆರ್ ಎ ರಲ್ಲಿ ದಾನ ಪತ್ರ ಆಗಿರುವ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿ. ಸದರಿ ದಾವಾ ಆಸ್ತಿಗಳು ನನ್ನ ತಂದೆ, ನನ್ನ ತಾತ, ನನ್ನ ತಾಯಿಯಿಂದ ಬಂದ ಆಸ್ತಿಗಳು ಎಂದರೆ ಸರಿ. ನಾವು ಖರೀದಿ ಮಾಡಿದ ಆಸ್ತಿಗಳಾಗಿರುವುದಿಲ್ಲ. ವಾದಿ ಲಕ್ಷ್ಮೀದೇವಿ ಸರಸ್ವತಮ್ಮನಿಗೆ ಸರ್ವೆ ನಂಬರ್ 258 ರಲ್ಲಿ ಪಾಲು ಸಿಗಬಾರದು ಎಂಬ ಕಾರಣಕ್ಕೆ ನನ್ನ ಮಗನ ಹೆಸರಿಗೆ ದಾನ ಪತ್ರ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಜೀವಂತ ಕಾಲದಲ್ಲಿ ಲಕ್ಷ್ಮೀದೇವಿ ಮತ್ತು

ಸರಸ್ವತಮ್ಮ ಮತ್ತು ನನಗೆ ಮತ್ತು 1 ರಿಂದ 6 ಮತ್ತು 8 ರಿಂದ 10 ನೇ ಪ್ರತಿವಾದಿಗಳಿಗೆ ಎಲ್ಲಾ ಆಸ್ತಿಗಳಲ್ಲಿ ಭಾಗ ಕೋಡಿ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 360 ರಲ್ಲಿ 1 ರಿಂದ 6 ನೇ ಪ್ರತಿವಾದಿ ಮತ್ತು 8 ರಿಂದ 10 ನೇ ಪ್ರತಿವಾದಿ, 2 ಮತ್ತು 3 ನೇ ವಾದಿಗಳಿಗೆ ಹಣವನ್ನು ನೀಡಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 258 ರಲ್ಲಿ ನಾನು ಲಕ್ಷ್ಮಿ ದೇವಿ ಮತ್ತು ಸರಸ್ವತಮ್ಮರವರಿಗೆ ಹಕ್ಕು ಕೋಡಬೇಕು ಎಂದರೆ ಸರಿಯಲ್ಲ. 2 ಮತ್ತು 3 ನೇ ವಾದಿಗೆ ರಾಜೀ ಆದರೆ ರೂ. 10 ಲಕ್ಷ ಹಣವನ್ನು ಕೋಡುತ್ತೇನೆ ಎಂದು ಹೇಳಿರುತ್ತೇನೆ. ಆದರೆ ಜಮೀನಿನಲ್ಲಿ ಆಸ್ತಿ ಕೊಡುವುದಿಲ್ಲ ಎಂದು ಹೇಳಿರುತ್ತೇನೆ. 8 ನೇ ಪ್ರತಿವಾದಿ ಬಸವನಗೌಡರವರ ಮಗಳನ್ನು ತಾಯಮ್ಮನ ಮಗ ಬೀಮನಗೌಡರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಮ್ಮ ಕುಟುಂಬದ ಸದಸ್ಯರೆಲ್ಲರು ಸೇರಿ 1 ಎಕರೆ ಜಮೀನು 10 ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಪಾಲು ವಿಭಾಗ ಆದ ನಂತರ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಲಕ್ಷ್ಮಿದೇ ಮತ್ತು ಸರಸ್ವತಮ್ಮರವರಿಗೆ ಪಾಲು ವಿಭಾಗ ಕೊಡಬಾರದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ,

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

**ಓ ಹೇ ಕೇ ಸರಿ ಇದೆ**

**24-03-2026**

2 ನೇ ಹೆ ಹಿ ಸಿವಿಲ್ ಜಡ್ಜ್ , ಬಳ್ಳಾರಿ